ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1148
ಸದಸ್ಯರ ಹೆಸರು : ಶ್ರೀ ರಘುನಾಥರಾವ್ ಮಲ್ಕಾಪುರೆ (ವಿಧಾನಸಭಾ ಕ್ಷೇತ್ರದಿಂದ ಚುನಾಯಿತರು)
ಉತ್ತರಿಸಬೇಕಾದ ದಿನಾಂಕ : 12.03.2021
ಉತ್ತರಿಸುವ ಸಚಿವರು : ಮಾನ್ಯ ಕಂದಾಯ ಸಚಿವರು

ಕ್ರ. ಸಂ	ಚುಕ್ಕೆ ಗುರುತಿಲ್ಲದ ಪ್ರಶ್ನೆ	ಉತ್ತರ
ಅ	ಬೀದರ್ ಜಿಲ್ಲೆಯಲ್ಲಿ ರೈತರ ಬೆಳೆಹಾನಿ ಸಮೀಕ್ಷೆ ನಡೆಸಲಾಗಿದೆಯೇ; ನಡೆಸಿದ್ದರೆ ಹಾನಿಗೊಳಗಾದ ರೈತರ ಸಂಖ್ಯೆ ಎಷ್ಟು; (ತಾಲ್ಲೂಕುವಾರು, ಎಕರೆವಾರು ಸಂಪೂರ್ಣ ಮಾಹಿತಿ ಒದಗಿಸುವುದು)	ಪ್ರಸಕ್ತ ಸಾಲಿನಲ್ಲಿ, ಬೀದರ್ ಜಿಲ್ಲೆಯಲ್ಲಿ, ಬರ ಪರಿಸ್ಥಿತಿ ಎದುರಾಗದೆ ಇರುವುದರಿಂದ ಬೆಳೆ ಹಾನಿ ಸಮೀಕ್ಷೆ ನಡೆಸುವುದು ಉದ್ಭವಿಸುವುದಿಲ್ಲ.
ಆ	ಸಮೀಕ್ಷೆಯಲ್ಲಿ ಪ್ರತಿ ಎಕರೆಗೆ ನಿಗದಿ ಪಡಿಸಿದ ಪರಿಹಾರ ಮೊತ್ತ ಎಷ್ಟು; (ತಾಲ್ಲೂಕುವಾರು, ನೀರಾವರಿ ಹಾಗೂ ಒಣಬೇಸಾಯದ ಬಗ್ಗೆ ಪ್ರತ್ಯೇಕವಾಗಿ ಮಾಹಿತಿ ನೀಡುವುದು)	ಬರ ಪರಿಸ್ಥಿತಿಯಲ್ಲಿ ಉಂಟಾದ ಬೆಳೆ ಹಾನಿಗೆ ಕೇಂದ್ರ ಸರ್ಕಾರದ SDRF/NDRF ಮಾರ್ಗಸೂಚಿ ಅನ್ವಯ ಕೆಳಕಂಡಂತೆ ಇನ್ ಪುಟ್ ಸಬ್ಸಿಡಿಯನ್ನು ಪ್ರತಿ ರೈತರಿಗೆ ಗರಿಷ್ಠ ಎರಡು ಹೆಕ್ಟೇರ್‌ಗೆ ಸೀಮಿತಗೊಳಿಸಿ ಪಾವತಿಸಲು ದರ ನಿಗಧಿಪಡಿಸಲಾಗಿದೆ. ಮಳೆಯಾಶ್ರಿತ ಬೆಳೆ — ರೂ 6,800/- ಹೆಕ್ಟೇರ್‌ಗೆ ನೀರಾವರಿ ಬೆಳೆ — ರೂ 13,500/- ಹೆಕ್ಟೇರ್‌ಗೆ ಬಹುವಾರ್ಷಿಕ ಬೆಳೆ — ರೂ 18,000/- ಹೆಕ್ಟೇರ್‌ಗೆ
ಇ	ಸದರಿ ಬರ ಪರಿಹಾರ ವಿತರಣೆಗಾಗಿ ಕೇಂದ್ರದಿಂದ ಬಿಡುಗಡೆಯಾದ ಮೊತ್ತ ಎಷ್ಟು ; (ತಾಲ್ಲೂಕುವಾರು ವಿವರ ನೀಡುವುದು)	ಪ್ರಸಕ್ತ ಸಾಲಿನಲ್ಲಿ ಬರ ಎಂದು ಘೋಷಣೆಯಾಗದೆ ಇರುವುದರಿಂದ, ಬರ ಪರಿಹಾರಕ್ಕಾಗಿ ಕೇಂದ್ರದಿಂದ ಅನುದಾನ ಬಿಡುಗಡೆಯಾಗಿರುವುದಿಲ್ಲ.
ಈ	ಬೀದರ್ ಜಿಲ್ಲೆಯ ರೈತರ ಬೆಳೆ ಹಾನಿಗಳಿಗೆ ಪರಿಹಾರ ಮೊತ್ತ ವಿತರಿಸಲಾಗಿದೆಯೇ ; ವಿತರಿಸಿದ್ದರೆ, ರೈತರ ಸಂಖ್ಯೆ, ಎಕರೆವಾರು ತಾಲ್ಲೂಕುವಾರು ಮಾಹಿತಿ ನೀಡುವುದು ;	ಉದ್ಭವಿಸುವುದಿಲ್ಲ
ಉ	ವಾಸ್ತವಿಕವಾಗಿ ರೈತರಿಗೆ ಪ್ರತಿ ಎಕರೆಗೆ ನೀಡಿದ ಪರಿಹಾರ ಮೊತ್ತ ಎಷ್ಟು ; ಇಲ್ಲಿಯವರೆಗೆ ಪರಿಹಾರ ನೀಡಲಾದ ರೈತರ ಸಂಖ್ಯೆ ಎಷ್ಟು ; (ತಾಲ್ಲೂಕುವಾರು ಫಲಾನುಭವಿಗಳವಾರು ನೀರಾವರಿ ಹಾಗೂ ಒಣಬೇಸಾಯದ ಸಂಪೂರ್ಣ ವಿವರ ನೀಡುವುದು)	ಉದ್ಭವಿಸುವುದಿಲ್ಲ
ಊ	ಎಷ್ಟು ಜನ ರೈತರಿಗೆ ಬರ ಪರಿಹಾರ ವಿತರಿಸುವುದು ಬಾಕಿ ಇರುತ್ತದೆ ? (ತಾಲ್ಲೂಕುವಾರು ವಿವರ ನೀಡುವುದು)	ಉದ್ಭವಿಸುವುದಿಲ್ಲ

ಕಂಇ 117 ಟಿಎನ್‌ಆರ್ 2021

(ಆರ್. ಅಶೋಕ)
ಕಂದಾಯ ಸಚಿವರು